ದಾವಣಗೆರೆ ನಗರದಲ್ಲಿರುವ ಸರ್ಕಾರಿ ಬಾಲಕರ ಪ್ರೌಢಶಾಲೆಗೆ ಹೊಸ ಕಟ್ಟಡ

1701: ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):–

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರದಲ್ಲಿರುವ ಸರಕಾರಿ ಬಾಲಕರ ಪ್ರೌಢಶಾಲೆಯು ಹಳೆಯ ಕಟ್ಟಡವಾಗಿದ್ದು ಇದನ್ನು ನವೀಕರಿಸುವ ಯೋಜನೆ ಸರಕಾರಕ್ಕೆ ಇದೆಯೇ;

ಆ) ಇದ್ದಲ್ಲಿ ಶಾಲೆಯ ಕಟ್ಟಡವನ್ನು ನವೀಕರಿಸಲು ಕೈಗೊಳ್ಳಲಿರುವ ಕ್ರಮವೇನು ?

ಡಾ: ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಪೂರ್ಣವಾಗಿ ನವೀಕರಿಸುವ ಯೋಜನೆ ಇರುವುದಿಲ್ಲ. ಆದರೆ ಕಟ್ಟಡ ದುರಸ್ತಿ ಕಾರ್ಯ ನಡೆಯುತ್ತಿದೆ.

ಆ) ಜಿಲ್ಲಾ ಪರಿಷತ್‌ನೊಂದಿಗೆ ವ್ಯವಹರಿಸಿ ಶಾಲೆಯ ಕಟ್ಟಡವನ್ನು ನವೀಕರಿಸುವ ಆಗತ್ಯವಿದ್ದಲ್ಲಿ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗುವುದು.

ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನವರಿಂದ ಕ್ಲಿನಿಕಲ್ ಫೀಸನ್ನು ವಸೂಲು ಮಾಡುವ ಬಗ್ಗೆ

2097: ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):–

ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನವರು ಮಲ್ಲೇಶ್ವರಂ ಕೆ.ಸಿ. ಜನರಲ್ ಆಸ್ಪತ್ರೆಯನ್ನು ಕ್ಲಿನಿಕಲ್ ಉದ್ದೇಶಕ್ಕೆ ತೆಗೆದುಕೊಂಡಿರುವುದು ನಿಜವೇ; ತೆಗದುಕೊಂಡಿದ್ದರೆ ಎಷ್ಟು ವರ್ಷಗಳವರೆಗೆ ತೆಗೆದುಕೊಳ್ಳಲಾಗಿತ್ತು;

ಆ) ಪ್ರತಿ ಒಬ್ಬ ವಿದ್ಯಾರ್ಥಿಗೆ ನಿಗದಿಪಡಿಸಿದ ಕ್ಲಿನಿಕಲ್ ಫೀ ಎಷ್ಟು; ಈ ಪ್ರಯೋಜನ ಪಡೆದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಎಷ್ಟು;

ಇ) ಇದುವರೆಗೆ ಎಷ್ಟು ವಿದ್ಯಾರ್ಥಿಗಳ ಬಾಬ್ತು ಕ್ಲಿನಿಕಲ್ ಫೀ ಸರ್ಕಾರಕ್ಕೆ ಸಂದಾಯವಾಗಿದೆ;

ಈ) ಉಳಿದ ವಿದ್ಯಾರ್ಥಿಗಳ ಬಾಬ್ತು ಬಾಕಿ ನಿಂತಿರುವ ಕ್ಲಿನಿಕಲ್ ಫೀಯನ್ನು ವಸೂಲು ಮಾಡದೇ ಇರಲು ಕಾರಣವೇನು; ಈ ಹಣವನ್ನು ಎಷ್ಟು ದಿನದಲ್ಲಿ ವಸೂಲು ಮಾಡಲಾಗುತ್ತದೆ ಎಂದು ಸರ್ಕಾರದವರು ಖಚಿತವಾಗಿ ತಿಳಿಸುವಿರಾ ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಹೌದು. ದಿನಾಂಕ 31-10-79 ರಿಂದ ದಿನಾಂಕ 31-12-87ರವರೆಗೆ ತೆಗೆದುಕೊಂಡಿರುತ್ತಾರೆ.

ಆ) ಸರ್ಕಾರಿ ಆದೇಶ ಸಂಖ್ಯೆ:ಆಕುಕ 165 ಎಂಎಂಇ 83 ದಿನಾಂಕ 17-1-84ರ ಪ್ರಕಾರ ಒಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ರೂ. 2500.00 ಎಂದು ನಿಗದಿಪಡಿಸಲಾಗಿದೆ. ಅದರಂತೆ

1984ರಲ್ಲಿ –603 ವಿದ್ಯಾರ್ಥಿಗಳು
1985ರಲ್ಲಿ –677 ವಿದ್ಯಾರ್ಥಿಗಳು